**ಓ ಎಸ್ ನಂಃ 754-14**
**ಡಿ ಡಬ್ಲ್ಯೂ ಃ 1**

**ದಿಃ 25-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಎನ್ ಡಿ ವಕೀಲರಿಂದ**

**29.** ಸಾಕ್ಷಿಗೆ ಈಗ ತಾನು ಹಾಜರುಪಡಿಸಿದ ದಾಖೆಗಳನ್ನು ತೋರಿಸಲಾಗಿ ಅದರಲ್ಲಿರುವ ಕ್ರಯಪತ್ರಗಳ ಚಕ್ಕುಬಂದಿಯೊಳಗೆ ಸರ್ವೆ ನಂ 69/3 ಮತ್ತು 69/2 ರಲ್ಲಿ ಬರುತ್ತದೆ ಎಂಬುದಾಗಿ ಇರುತ್ತದೆ. ನಾನು ಹಾಜರುಪಡಿಸಿದ ಕ್ರಯಪತ್ರಗಳಲ್ಲಿ ಸರ್ವೆ ನಂ 69/3 ಎಂಬುದಾಗಿ ನಮೂದು ಇಲ್ಲ. ಸರ್ವೆಯರ್ ರವರು ಸರ್ವೆ ಮಾಡಲು ಹೋಗುವ ಬಗ್ಗೆ ನನಗೆ ನೋಟಿಸನ್ನು ಕೊಟ್ಟಿದ್ದರು. ಸರ್ವೆಯರ್ ರವರು ಸ್ಥಳಪರಿಶೀಲನೆ ಮಾಡುವಾಗ ನಾನು ಹಾಜರಿದ್ದೆ. ಸರ್ವೆಯರ್ ರವರು ಸರ್ವೆ ನಂ 69/2 ಮತ್ತು 69/3 ನ್ನು ಅಳತೆ ಮಾಡಿರುತ್ತಾರೆ ಎಂದರೆ ನಿಜ. ವಾದಿ ಹಾಜರುಪಡಿಸಿದ ಮೆಮೋ ಆಫ್ ಇನ್‌ಸ್ಟ್ರಕ್ಷನ್ ನನ್ನು ಓದಿರುತ್ತೇನೆ. ನಾನು ಸರ್ವೆ ವರದಿಯನ್ನು ಓದಿರುತ್ತೇನೆ. ಸರ್ವೆ ವರದಿಗೆ ಸ್ವಲ್ಪ ವಿಷಯಗಳಿಗೆ ನನ್ನ ಸಮ್ಮತಿ ಇದ್ದು ಸ್ವಲ್ಪ ವಿಷಯಗಳಿಗೆ ನನ್ನ ಸಮ್ಮತಿ ಇರುವುದಿಲ್ಲ. ನಾನು ಸರ್ವೆ ವರದಿಯನ್ನು ಪ್ರಶ್ನೆ ಮಾಡಿಲ್ಲ. ಸರ್ವೆ ವರದಿಯಲ್ಲಿ ಸರ್ವೆ ನಂಬರ್ 69/2 ಮತ್ತು 69/3 ಬೇರೆ ಬೇರೆ ಆಸ್ತಿಗಳು ಎಂದು ನಮೂದಿಸಲಾಗಿದೆ ಎಂದರೆ ನಿಜ, ಆದರೆ ಅದು ಸುಳ್ಳು ಇರುತ್ತದೆ. ಸರ್ವೆಯರ್ ರವರು ಸರ್ವೆ ನಂ 69/2 ಮತ್ತು 69/3 ನ್ನು ಅಳತೆ ಮಾಡುವಾಗ ಹಾಜರಿದ್ದೆ. ಸರ್ವೆಯರ್ ರವರು ಸರ್ವೆ ನಂ 69/2 ಮತ್ತು 69/3 ನ್ನು ಗುರುತಿಸಿರುತ್ತಾರೆ. ಸರ್ವೆ ವರದಿಯಲ್ಲಿ ಸರ್ವೆ ನಂ 69/2 ರ ಪೂರ್ವಕ್ಕೆ ರಂಗಯ್ಯ ಮತ್ತು ಸರ್ವೆ ನಂ 69/3 ಬರುತ್ತದೆ ಎಂಬುದಾಗಿ ಬರೆಯಲಾಗಿದೆ ಎಂದರೆ ನಿಜ, ಆದರೆ ಅದು ತಪ್ಪು ಇರುತ್ತದೆ. ಸರ್ವೆ ನಂ 69/3 ರ ಪಶ್ಚಿಮ ಗಡಿಗೆ ಬಿ ಜೆ ಪುಟ್ಟಸ್ವಾಮಿರವರ ಜಮೀನು ಬರುತ್ತದೆ ಎಂದು ಬರೆಯಲಾಗಿದೆ ಎಂದರೆ ನಿಜ, ಆದರೆ ಅದು ತಪ್ಪು ಇರುತ್ತದೆ. ವಾಸ್ತವಿಕವಾಗಿ ಸರ್ವೆ ನಂ 69/2 ರ ಪೂರ್ವಕ್ಕೆ ರಂಗಯ್ಯರವರ ಜಮೀನು ಮಾತ್ರ ಬರುವುದಿಲ್ಲ ಸರ್ವೆ ನಂ 69/3 ಸಹ ಬರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಮೂರು ಕ್ರಯಪತ್ರಗಳಲ್ಲಿ ಪೂರ್ವ ದಿಕ್ಕಿಗೆ ರಂಗಯ್ಯನ ಜಮೀನು ಮಾತ್ರ ಎಂದು ನಮೂದು ಮಾಡಿ ಸರ್ವೆ ನಂ 69/3 ನ್ನು ಹೊರತುಪಡಿಸಿ ಸುಳ್ಳು ಆಸ್ತಿಯನ್ನು ಕ್ಲೇಂ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**30.** ನಾನು ಹಾಜರುಪಡಿಸಿದ ಕ್ರಯಪತ್ರಗಳಲ್ಲಿ 1 ಎಕರೆ ಹೈನು ಜಮೀನು ಮತ್ತು 27 ಗುಂಟೆ ಖರಾಬು ಇದೆ ಎಂದು ನಮೂದು ಇಲ್ಲ ಬದಲಾಗಿ 1 ಎಕರೆ 27 ಗುಂಟೆ ಎಂದು ಇರುತ್ತದೆ. ನನ್ನ ಪ್ರಕಾರ 1 ಎಕರೆ 20 ಗುಂಟೆ ಹೈನು ಜಮೀನು ಮತ್ತು 7 ಗುಂಟೆ ಖರಾಬು ಜಮೀನು ಎಂದರೆ ನಿಜ, ಸಾಕ್ಷಿ

ಮುಂದುವರೆದು 1 ಎಕರೆ 27 ಗುಂಟೆ ಜಮೀನು ಹೈನು ಜಮೀನು ಇರುತ್ತದೆ ಎಂದು ಹೇಳುತ್ತಾರೆ. ಯಲ್ಲಮ್ಮರವರು ಖರೀದಿ ಮಾಡಿದ ಆಸ್ತಿಯ ವಿಸ್ತೀರ್ಣ 1 ಎಕರೆ 20 ಗುಂಟೆ ಎಂದರೆ ನಿಜ. ಯಲ್ಲಮ್ಮರವರು ಭದ್ರಯ್ಯ ಶೆಟ್ಟಿಯಿಂದ ಖರೀದಿ ಮಾಡಿದ 1 ಎಕರೆ 20 ಗುಂಟೆ ಜಮೀನನ್ನೆ ನಾನು ರಾಮಾಂಜನೇಯ ಕಡೆಯಿಂದ ಖರೀದಿ ಮಾಡಿರುತ್ತೇನೆ. ಇದರಲ್ಲಿ 7 ಗುಂಟೆ ಜಮೀನು ನನಗೆ ಹೇಗೆ ಬಂದಿರುತ್ತದೆ ಎಂದರೆ ಆ 7 ಗುಂಟೆ ಜಮೀನು ಖರಾಬು ಇರುತ್ತದೆ ಎಂದು ಹೇಳುತ್ತಾರೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ 7 ಗುಂಟೆ ಖರಾಬು ಎಂದು ನಮೂದು ಇಲ್ಲ. ಆದ ಕಾರಣ ನಾನು ವಾಸ್ತವಿಕವಾಗಿ 1 ಎಕರೆ 20 ಗುಂಟೆಗೆ ಮಾಲೀಕ ಎಂದರೆ 1 ಎಕರೆ 27 ಗುಂಟೆಗೆ ಮಾಲೀಕ ಎಂದು ಹೇಳುತ್ತಾರೆ. ನನಗೆ ಹೆಚ್ಚಿನ 7 ಗುಂಟೆ ಆಸ್ತಿಯ ಮೇಲೆ ಹಕ್ಕನ್ನು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆಯರ್ ರವರು ಬರೆದಿರುವ 1 ಎಕರೆ ಹೈನು ಜಮೀನು ಮತ್ತು 27 ಗುಂಟೆ ಖರಾಬು ಜಮೀನು ಸರಿಯಿರುತ್ತದೆ.

31. ವಾದಿ ಹಾಜರುಪಡಿಸಿದ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ವಾದಿ ಹಾಜರುಪಡಿಸಿದ ದಾಖಲೆಗಳು ಸರ್ವೆ ನಂ 69/3 ಕ್ಕೆ ಸಂಬಂದಿಸಿರುತ್ತವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆ ಅವೆಲ್ಲವೂ ಸೃಷ್ಟಿ ಮಾಡಿದ ದಾಖಲೆಗಳಾಗಿರುತ್ತವೆ. ವಾದಿ ಹಾಜರುಪಡಿಸಿದ ನಿಪಿ 1 ರಿಂದ 47 ನೇ ದಾಖಲೆಗಳನ್ನು ನಾನು ಪ್ರಶ್ನೆ ಮಾಡಿರುತ್ತೇನೆ. ನಾನು ಖಾತವನ್ನು ಪ್ರಶ್ನೆ ಮಾಡಿದ್ದು ಅದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಿವಿಲ್ ನ್ಯಾಯಾಲಯ ಆದೇಶಕ್ಕೆ ಒಳಪಟ್ಟಿರುತ್ತದೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಆದೇಶ ಆಗಿರುತ್ತದೆ. ನಿಪಿ 1 ರ ಪ್ರಕಾರ ಸರ್ವೆ ನಂ 69 ರಲ್ಲಿ 2 ಎಕರೆ ಇತ್ತು ಎಂದರೆ ನಿಜ. ಸದರಿ ಆಸ್ತಿಯಲ್ಲಿ ನಾನು 1 ಎಕರೆ 20 ಗುಂಟೆ ಹೈನು ಜಮೀನನ್ನು ಖರೀದಿ ಮಾಡಿದ್ದೇನೆ ಎಂದರೆ ನಿಜ. ನಿಪಿ 1 ವಿಭಾಗ ಪತ್ರದಲ್ಲಿ ಖರಾಬು ಜಮೀನು ಇದ್ದು ತೋರಿಸಿರುವುದಿಲ್ಲ. ನನ್ನ ಭಾಗಕ್ಕೆ ಬಂದ 1 ಎಕರೆ 20 ಗುಂಟೆ ಸರ್ವೆ ನಂ 69/2 ಆಗಿ ಉಳಿಕೆ 20 ಗುಂಟೆ ಜಮೀನು ಸರ್ವೆ ನಂ 69/3 ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ 69/3 ರಲ್ಲಿ ನನಗೆ ಯಾವುದೇ ಹಕ್ಕುಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ 69/3 ಕ್ಕೆ ನಾನೇ ಮಾಲೀಕ ಎಂದು ನಾನು ದಾವೆ ಹೂಡಿರುತ್ತೇನೆ. ನಾನು ಹೇಳುತ್ತಿರುವ ದಾವೆ ಭೋಗ್ಯ ಪತ್ರಕ್ಕೆ ಸಂಬಂದಿಸಿದಂತೆ ಮತ್ತು ನನ್ನನ್ನು ಮಾಲೀಕ ಎಂದು ಘೋಷಣೆ ಮಾಡಬೇಕು ಎಂಬುದಾಗಿ ಇರುತ್ತದೆ. ಆ ದಾವೆ ಒ ಎಸ್ ನಂ 410/2014 ಆಗಿರುತ್ತದೆ. ಸಾಕ್ಷಿಗೆ ಈಗ ಒ ಎಸ್ ನಂ 410/2014 ರ ವಾದ ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿದ್ದು ಅದನ್ನು ನಿಡಿ 48 ಎಂದು ಗುರುತಿಸಲಾಯಿತು. ಸರ್ವೆ ನಂ 69/3 ನನ್ನದೆಂದು ಹೇಳಿ ನಾನು ಎಲ್ಲಿಯೂ ದಾವೆ ಹೂಡಿಲ್ಲ ಎಂದರೆ ಸರಿಯಲ್ಲ. ನಾನು ಸರ್ವೆ ನಂ 69/2 ರಲ್ಲಿ 1 ಎಕರೆ 20 ಗುಂಟೆಗೆ ಮಾತ್ರ ಮಾಲೀಕರು ಎಂದರೆ ಸರಿಯಲ್ಲ. ನಾನು ಚಕ್ಕುಬಂದಿಯಲ್ಲಿರುವ ಆಸ್ತಿಗೆ ಮಾಲೀಕನಾಗಿರುತ್ತೇನೆ.

32. ವಾದಿಯ ದಾನಪತ್ರ ಮತ್ತು ಅವರುಗಳ ಮದ್ಯೆ ಆದ ಭಾಗ ಪತ್ರದ ಬಗ್ಗೆ ಮಾಹಿತಿ ಇಲ್ಲ ಸಾಕ್ಷಿ ಮುಂದುರೆದು ಅವುಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಸುಳ್ಳು ಚಕ್ಕುಬಂದಿಗಳನ್ನು ಬರೆಸಿಕೊಂಡು ದಬ್ಬಾಳಿಕೆ ಮಾಡಿ ಸರ್ವೆ ನಂ 69/3 ನ್ನು ಕಬಳಿಸಬೇಕು ಎಂದುಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**